## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ

## CC No.861-2024

**(ಇಂದು ದಿಃ 12-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಸಿದ್ದಣ್ಣಗೀರಿಗೌಡರ | CW-1 | PW-4 |
| ತಂದೆ/ಗಂಡನ ಹೆಸರು | ಭೀಮರಾಯ | | |
| ವಯಸ್ಸು | 38 ವರ್ಷ | | |
| ಉದ್ಯೋಗ | PSI ಮಾರ್ಕೇಟ್ ಪೋಲೀಸ್ ಠಾಣೆ ಬಿದರ್ | | |
| ವಾಸ ಸ್ಥಳ | ಬಿದರ್ | | |

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ನಾನು 2023 ಜುಲೈನಿಂದ 2023 ಡಿಸೆಂಬರ್ ರವರೆಗೆ ಮುದೋಳ ಪೊ.ಠಾಣೆಯಲ್ಲಿ PSI ಆಗಿ ಕಾರ್ಯನಿರ್ವಹಿಸುತ್ತಿದ್ದೆ. ದಿನಾಂಕ 08.11.2023 ರಂದು ಮದ್ಯಾಹ್ನ 02.30 ಕ್ಕೆ ನಾನು ಠಾಣೆಯಿಂದ ಗಸ್ತು ಕರ್ತವ್ಯಕ್ಕೆ ಹೊರಟೆ ಜೊತೆಯಲ್ಲಿ ಚಾಸ-4 ಮತ್ತು 5 ಇದ್ದರು . ನಮಂ ಇಲಾಖಾ ಜೀಪನಲ್ಲಿ ಗಸ್ತು ಮಾಡುತ್ತಿದ್ದಾಗ ಸಂಜೆ 04.30 ಕ್ಕೆ ರಿಬನಪಲ್ಲಿ ಚೆಕ್ ಪೊಸ್ಟ ಗೆ ಹೋಗುತ್ತಿದ್ದಾಗ ಅಲ್ಲಿ ತೆಲಂಗಾಣದಲ್ಲಿ ಚುನಾವಣೆ ಇದ್ದ ಕಾರಣ ವಾಹನಗಳನ್ನು ತಪಸಣೆ ಮಾಡುತ್ತಿದ್ದರು. ಚೆಕ್ ಪೋಸ್ಟಗೆ ಸಿಬ್ಬಂದಿಯಾಗಿ ಚಾಸಾ-6 ಇದ್ದರು . ಸಂಜೆ 04.30 ಕ್ಕೆ ಕಸ್ತೂರಿ ಪಲ್ಲಿ ಕಡೆಯಿಂದ ಒಬ್ಬ ವ್ಯಕ್ತಿ ಕಲಬೇರಿಕೆ ಶೇಂದಿ ತೆಗದುಕೊಂಡು ಬರುತ್ತಿರುವುದಾಗಿ ಮಾಹಿತಿ ಬಂತು. ಆಗ ದಾಳಿ ಮಾಡಲು ಪಂಚರಾಗಿ ಚಸಾ-2 ಮತ್ತು 3 ರವರನ್ನು ಕರೆದುಕೊಂಡೇವು . ಸಂಜೆ 05.30 ಕ್ಕೆ ಒಬ್ಬ ವ್ಯಕ್ತಿ ರಿಬ್ಬನಪಲ್ಲಿ ಚಕ್ ಪೂಸ್ಟ ಬಳಿ ತಲೆಯ ಮೇಲೆ ಒಂದು ಪ್ಲಾಸ್ಟಿಕ್ ಚೀಲಾ ಇಟ್ಟುಕೊಂಡು ಬರುತ್ತಾರೆ . ಸದರಿ ವ್ಯಕ್ತಿಯನ್ನುತೆಡದು ನಮ್ಮ ಸಿಬ್ಬಂದಿ ಪಂಚರ ಸಮಕ್ಷಮ ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಚೆನ್ನಬಸಪ್ಪ ತಂದೆ ಮೋಗಲಪ್ಪ ಸಾಃ ರಿಬ್ಬನಪಲ್ಲಿ ಎಂದು ಹೇಳಿದರು. ಪ್ಲಾಸ್ಟಿಕ್ ಚೀಲದಲ್ಲಿ ಏನು ಇದೆ ಎಂದು ಕೇಳಿದಂಾಗ ಆತ ಸಮರ್ಪಕ ಉತ್ತರ ಕೋಡದೆ ಇದ್ದಾಗ ನಮ್ಮ ಸಿಬ್ಬಂದಿ ಸದರಿ ಚೀಲಾ ವನ್ನು ಪರಿಶೀಲನೆ ಮಾಡಿ ನೋಡಿದಾಗ ತಲಾ ಒಂದು ಲೀಟರ ಅಳತೆ 20 ಶೇಂದಿ ಪ್ಯಾಕೇಟಗಳು ಇರುವುದು ಕಂಡುಬಂತು. ಅದೇ ರೀತಿ ಆತನ

ಬಳಿ 80/- ರುಪಾಯಿ ಹಣ ಸಿಕ್ಕಿತ್ತು. ವ್ಯಕ್ತಿಯನ್ನು ವಿಚಾರಿಸಲಾಗಿ ಶೇಂದಿಯನ್ನು ತೆಲಂಗಾಣದಿಂದ ತಂದಿದ್ದು ಆತನಿಗೆ ಯಾರು ಕೊಟ್ಟರು ಗೊತ್ತಿಲ್ಲ ಎಂದು ಹೇಳುತ್ತಾನೆ. ಮುಂದುವೆರದು ತೆಲಂಗಾಣದಲ್ಲಿ 5 ರೂಪಾಯಿ ಪ್ಯಾಕೇಟ್ ಗೆ ಖರಿದಿಸಿ ಕರ್ನಾಟಕದಲ್ಲಿ 10/- ರೂಪಾಯಿ ಪ್ಯಾಕೇಟ್ ಗೆ ಮಾರಾಟ ಮಾಡುತ್ತೇನೆ ಎಂದು ಹೇಳಿದ. ಸ್ಥಳದಲ್ಲಿ 05.45 ರಿಂದ 06.45 ರವರೆಗೆ ಚಸ-2 ಮತ್ತು 3 ರ ಸಮಕ್ಷಮ ಜಪ್ತಿ ಪಂಚನಾಮೆ ಕ್ರಮ ಕೈಗೊಂಡು 20 ಪ್ಯಾಕೇಟ್ ಶೇಂದಿ ಮತ್ತು 80/- ರೂಪಾಯಿ ವಶಪಡಿಸಿಕೊಂಡಿದ್ದೇವೆ . FSL ಗೆ ಕಳುಹಿಸಲು ಎಂದು ಒಂದು ಲೀಟರ್ ಶೆಂದಿಯನ್ನು ಪ್ಲಾಸ್ಟಿಕ್ ಬಾಟಲ್ ಗೆ ಹಾಕಿ ಪಂಚರ ಸಮಕ್ಷಮ ಶೀಲ್ ಮಾಡಿದೇವು. ಠಾಣೆಗೆ ಬಂದು ಪಂಚನಾಮೆ , ವರದಿ ಮತ್ತು ಮುದ್ದೆ ಮಾಲುಗಳನ್ನು ಚಸಾ-9 ರವರಿಗೆ ಒಪ್ಪಿ ಸಿದ್ದೇನೆ. ಸಾಕ್ಷಿ ತಾನು ಸಲ್ಲಿಸಿದ ವರದಿ ಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ . ರಾಸಾಯನಿಕ ಪರೀಕ್ಷೆಗೆ ಎಂದು ಸಂಗ್ರಹಿಸಿದ ಕಾಲಿ ಬಾಟಲಿ ಇಂದು ನ್ಯಾಯಾಲಯದ ಮುಂದೆ ಇದ್ದು ಅದನ್ನು ಈಗಾಗಲೇ ಮು. ಮಾ. 1 ಎಂದು ಗುರುತಿಸಲಾಗಿದೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ಶ್ರೀ RM ವಕೀಲರಿಂದಃ**

ನಾನು ಠಾಣೆಗೆ ಹೋಗಿ ಚಸಾ-9 ರವರಿಗೆ ಪಂಚನಾಮೆ , ವರದಿ ಮತ್ತು ಮುದ್ದೆ ಮಾಲುಗಳನ್ನು ಒಪ್ಪಿ ಸಿದ ನಂತರ FIR ಆಗಿದೆ . ದಾಳಿ ಮಾಡುವ ಮುಂಚೆ ಮಾನ್ಯ JMFC ನ್ಯಾಯಾಲಯದ ಅನುಮತಿ ಪಡೆದುಕೊಂಡಿಲ್ಲ. 80/- ರೂಪಾಯಿ ಹಣದ ಮುಖ ಬೆಲೆ ಹೇಳಲು ಆಗುವುದಿಲ್ಲ. ಪಂಚನಾಮೆಯಲ್ಲಿ ಹಣದ ಮುಖ ಬೆಲೆ ಮತ್ತು ನೋಟ್ ನಂಬರ ಬರೆದಿಲ್ಲ. ರಿಬ್ಬನಪಲ್ಲಿ ನಂತರ ತೆಲಂಗಾಣ ಗಡಿ ಇದೆ ಎಂದರೆ ಸರಿ. ತೆಲಂಗಾಣ ಗಡಿ ಗೆ ಹೊಂದಿಕೊಂಡಂತೆ ತೆಲಂಗಾಣದ ಗ್ರಾಮಗಳು ಇವೆ ಎಂರದೆ ಸರಿ. ಆರೋಪಿ ತೆಲಂಗಾಣದಿಂದ ಶೆಂದಿ ತಂದು ರಿಬ್ಬನಪಲ್ಲಿಯಲ್ಲಿ ಮಾರಾಟ ಮಾಡುತ್ತಿದ್ದ ಎಂದು  ಅದ್ದಕ್ಕಾಗಿ ಶೆಂದಿ ತರುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಬಳಿಯಿಂದ 80/- ರೂಪಾಯಿ ಮತ್ತು 20 ಪ್ಯಾಕೇಟ್ ಶೇಂದಿ ವಶಪಡಿಸಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಸಿಬ್ಬಂದಿ ದಾಳಿ ಗೆ ಹೋಗಿ ರಿಬ್ಬನಪಲ್ಲಿ ಚೆಕ್ ಪೊಸ್ಟ ಬಳಿ ಆರೋಪಿಯನ್ನು ಹಿಡಿದು ವಿಚಾರಿಸಿದಾಗ ಆತನ ಬಳಿ 20 ಪ್ಯಾಕೇಟ್್ ಶೆಂದಿ ಇತ್ತು ನಾವು ಸದರಿ ಶೇಂದಿಯನ್ನು ಪಂಚರ

ಸಮಕ್ಷಮ ಪಂಚನಾಮೆ ಮಾಡಿ ವಶಪಡಿಸಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸ್ಥಳದಲ್ಲಿಃ ಪಂಚಾನಾಮೆಗೆ ಪಂಚರ ಸಹಿ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಚಸಾ-9 ರವರಿಗೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ, ರಾಸಾಯನಿಕ ಪರೀಕ್ಷೆ ಗೆ ಶೆಂದಿ ಮಾದರಿ ಸಂಗ್ರಹಿಸಿಲ್ಲಎಂದರೆ ಸರಿಯಲ್ಲ, ಮುದ್ದೆ ಮಾಲುಗೂ ಆರೋಪಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಸೇಡಂ.**